ಪ್ರಾದೇಶಿಕ ಆಯುಕ್ತರ ಕಾರ್ಯಾಲಯ, ಬೆಳಗಾವಿ ವಿಭಾಗ ಬೆಳಗಾವಿ
OFFICE OF THE REGIONAL COMMISSIONER, BELAGAVI DIVISION, BELAGAVI-590002
ದೂರವಾಣಿ Telephone: 0831-2404007 2461401, 2461402
E-mail: rcbelagavi@gmail.com Website: www.regional-commissioner-belgaum.gov.in

ಸಂಖ್ಯೆ:ಪ್ರಾಆಬೆ:ಒಆಡಳಿತ-1:ವಿವ- 03/25-26 ದಿನಾಂಕ: As E-Signed

## ದರಪಟ್ಟಿ ಆಹ್ವಾನ ಅಧಿಸೂಚನೆ

ವಿಷಯ: ಈ ಕಛೇರಿಗೆ ಅವಶ್ಯವಿರುವ ಸ್ಟೇಷನರಿ/ಲೇಖನ ಸಾಮಗ್ರಿಗಳನ್ನು ಒಂದು ವರ್ಷದ ಮಟ್ಟಿಗೆ ಪೂರೈಸುವ ಕುರಿತು.

ಪ್ರಾದೇಶಿಕ ಆಯುಕ್ತರ ಕಾರ್ಯಾಲಯ, ಬೆಳಗಾವಿ ವಿಭಾಗ, ಬೆಳಗಾವಿ ಇಲ್ಲಿಗೆ ಅಗತ್ಯವಿರುವ ಸ್ಟೇಷನರಿ/ಲೇಖನ ಸಾಮಗ್ರಿಗಳ ಸರಬರಾಜಗಾಗಿ ಅರ್ಹ ಹಾಗೂ ನೋಂದಾಯಿತ ಪೂರೈಕೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

**ಷರತ್ತುಗಳು**

1) ಸದರಿ ಒಪ್ಪಂದವು ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯ ವರೆಗೆ ಚಾಲ್ತಿಯಲ್ಲಿರುತ್ತದೆ. ಈ ನಡುವೆ ಒಪ್ಪಂದವನ್ನು ಮುಂದಿವರೆಸುವ ಅಥವಾ ಮೊಟಕುಗೊಳಿಸುವ ಅಧಿಕಾರವನ್ನು ಪ್ರಾದೇಶಿಕ ಆಯುಕ್ತರು ಹೊಂದಿರುತ್ತಾರೆ.
2) ದರ ಪಟ್ಟಿಯಲ್ಲಿ ಸದರಿ ಸಾಮಗ್ರಿಗಳು/ಉಪಕರಣಗಳನ್ನು ಈ ಕಛೇರಿಗೆ ಪೂರೈಸಲು ತಗಲುವ ಸಾರಿಗೆ ವೆಚ್ಚ, ಸೇವಾ ಶುಲ್ಕ, ಇತ್ಯಾದಿ ಒಳಗೊಂಡು ದರ ನಮೂದಿಸುವುದು ಒಟ್ಟು ಆಧಾರದ ಮೇಲೆ ದರಗಳನ್ನು ಪರಿಗಣಿಸಲಾಗುವುದು.
3) ದರಪಟ್ಟಿಯ ನಮೂನೆಯನ್ನು ಇದರೊಂದಿಗೆ ಲಗತ್ತಿಸಿದ್ದು ಸದರಿ ನಮೂನೆಯಲ್ಲಿ ಮಾತ್ರ ದರಗಳನ್ನು ನಮೂದಿಸುವುದು. ದರ ಪಟ್ಟಿಯಲ್ಲಿ ಚಾಲ್ತಿಯಲ್ಲಿರುವ GSTIN ನಮೂದಿಸುವುದು.
4) ಈ ಕಚೇರಿಯ ಬೇಡಿಕೆಗೆ ಅನುಸಾರ ಸಾಮಗ್ರಿಗಳು ಸುಸ್ಥಿಯಲ್ಲಿ ಈ ಕಚೇರಿಗೆ ಸ್ವೀಕೃತವಾದ ನಂತರ ಅನ್ವಯವಾಗುವ TDS ಕಟಾಯಿಸಿ ನಿವ್ವಳ ಮೊತ್ತವನ್ನು ಪಾವತಿಸಲಾಗುವುದು
5) ಪೂರೈಕೆ ಆದೇಶ ನೀಡಿದ 05 ದಿನದೊಳಗಾಗಿ ಸಾಮಗ್ರಿಗಳನ್ನು ಈ ಕಾರ್ಯಾಲಯಕ್ಕೆ ಪೂರೈಸುವುದು.
6) ಪ್ರಾದೇಶಿಕ ಆಯುಕ್ತರ ಕಛೇರಿಗೆ ಪೂರೈಸಬೇಕಾಗಿರುವ ಸಾಮಗ್ರಿಗಳ ಸಂಖ್ಯೆಯು ಯಾವದೇ ಕಾರಣಗಳಿಗಾಗಿ ಬದಲಾವಣೆಗೊಳಪಟ್ಟಿರುತ್ತದೆ. ವಾಸ್ತವಿಕ ಬೇಡಿಕೆಗನುಣವಾಗಿ ಸಾಮಗ್ರಿಗಳ ಪೂರೈಕೆ ಆದೇಶ ನೀಡಲಾಗುತ್ತದೆ.
7) ಸಾಮಗ್ರಿಗಳು ಉತ್ತಮ ಸ್ಥಿತಿಯಲ್ಲಿ ಸ್ವೀಕೃತವಾದ ನಂತರ ಖಜಾನೆ-2 ಮೂಲಕ ಹಣ ಪಾವತಿಸಲಾಗುವುದು ನಿಯಮಾನುಸಾರ ಆದಾಯ ತೆರಿಗೆ/GST TDSನ್ನು ಕಟಾಯಿಸಲಾಗುವುದು.
8) ಅರ್ಹ ಪೂರೈಕೆದಾರರು ಷರತ್ತುಗಳಿಗೆ ಬಧ್ಧರಾರಿರುವ ಬಗ್ಗೆ ರೂ.100/-ಮೌಲ್ಯದ E-Stamp ಮೇಲೆ ಕರಾರು ಪತ್ರವನ್ನು ಸಲ್ಲಿಸುವುದು.
9) ಸಾಮಗ್ರಿಗಳ ಒಟ್ಟು ಮೊತ್ತದ 5% ಭದ್ರುತಾ ಠೇವಣಿಯನ್ನು ಪ್ರಮಾದೇಶಿಕ ಆಯುಕ್ತರು ಬೆಳಗಾವಿ ವಿಭಾಗ, ಬೆಳಗಾವಿ ಇವರ ಹೆಸರಿನಲ್ಲಿ ಬ್ಯಾಂಕ್ ಗ್ಯಾರಂಟಿಯೊಂದಿಗೆ ಸಲ್ಲಿಸುವುದು.
10) ಪೂರೈಕೆದಾರರು ಈ ಹಿಂದೆ ಗುತ್ತಿಗೆ ನೀಡಿದ ಸರ್ಕಾರದ ಕಛೇರಿಯಿಂದ 03 ವರ್ಷದ ಪ್ರಮಾಣ ಪತ್ರ ನೀಡುವುದು. ಪೂರೈಕೆದಾರರು ಈ ಹಿಂದೆ ಹಣಕಾಸು 03 ವರ್ಷದ ಆದಾಯ ತೆರಿಗೆ ರೀಟರ್ನ್ಸ್ ಗಳ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು.
11) ಪೂರೈಕೆದಾರರು ಯಾವುದೇ ಸುಳ್ಳು ಅಥವಾ ತಪ್ಪು ಮಾಹಿತಿ ನೀಡಿದ್ದಲ್ಲಿ ಯಾವದೇ ಸಮಯದಲ್ಲಿ ಅವರ ಒಪ್ಪಂದವನ್ನು ರದ್ದುಪಡಿಸಲಾಗುವುದು ಹಾಗೂ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

-2

12) ವಾರ್ಷಿಕ ಒಪ್ಪಂದದ ಮೊತ್ತವನ್ನು ಅನ್ವಯಿಸು ತೆರಿಗೆಗಳನ್ನು ಕಟಾಯಿಸಿ (Prorata Basis) ತ್ರೈಮಾಸಿಕವಾಗಿ ಪಾವತಿಸಲಾಗುವುದು. ಈ ಕಾರ್ಯಾಲಯಕ್ಕೆ ಯಾವುದೇ ಮುಂಗಡ ನಿಡುವುದಿಲ್ಲ. ಒಪ್ಪಂದದ ಅವಧಿಯಲ್ಲಿ ದರ ಹೆಚ್ಚಳಿಕೆ ಕೋರಿಕೆ ಸಲ್ಲಿಸಲು ಅವಕಾಶ ಇಲ್ಲ.

13) ದರ ಪಟ್ಟಿಗಳನ್ನು ಮುಚ್ಚಿದ ಲಕೋಟೆಯ ಮೇಲೆ ಪ್ರಾದೇಶಿಕ ಆಯುಕ್ತರ ಕಛೇರಿಗೆ **"ಸ್ಟೇಷನರಿ/ಲೇಖನ ಸಾಮಗ್ರಿಗಳ ಸರಬರಾಜು ಕುರಿತು"** ಎಂದು ಬರೆಯುವುದು.

9) ದರ ಪಟ್ಟಿ ಸಲ್ಲಿಸುವ ಕೊನೆಯ ದಿನಾಂಕ:30 -06-2025 ಸಮಯ 4.00 ಗಂಟೆಯ ವರೆಗೆ (ಕಛೇರಿಯ ವೇಳೆಯಲ್ಲಿ ಮಾತ್ರ).

Digitally signed by
SANJAY BHALCHANDRA SHETTENNAVAR
Date: 19-06-2025 12:35:42

**ಪ್ರಾದೇಶಿಕ ಆಯುಕ್ತರು**
**ಬೆಳಗಾವಿ ವಿಭಾಗ,ಬೆಳಗಾವಿ**

ಪ್ರತಿ: 1) ಈ ಕಾರ್ಯಾಲಯದ e-Governance ಶಾಖೆಗೆ ಕಛೇರಿಯ ವೆಬ್ ಸೈಟಿನಲ್ಲಿ ಪ್ರಕಟಿಸುವ ಕುರಿತು.
2) ಕಛೇರಿಯ ಸೂಚನಾ ಫಲಕಕ್ಕೆ